KARNATAKA REGIONAL ORGANISATION FOR SOCIAL SERVICE
KROSS

ಖಾಸಗಿ ಪ್ರಸಾರಕ್ಕಾಗಿ

# ಅಲೆಗಳು

ತ್ರೈ ಮಾಸಿಕ ಪತ್ರಿಕೆ

ಸಂಚಿಕೆ 32

ಅಕ್ಟೋಬರ್ - ಡಿಸೆಂಬರ್ 2015




## ಸರ್ವತೋಮುಖ ಬೆಳವಣಿಗೆಗೆ ಸಮತೋಲನ ಆಹಾರ



ಮುಖ್ಯ ಸಂಪಾದಕರು
ಫಾ. ಸೆಬಾಸ್ಟಿಯನ್ ಫರ್ನಾಂಡಿಸ್

ಒಳ ಪುಟಗಳಲ್ಲಿ :

ಮಗುವಿನ ಸಮಗ್ರ ಬೆಳವಣಿಗೆಗೆ ಪೂರಕ ಪೌಷ್ಠಿಕ ಆಹಾರ
ಶ್ರೀ ವರ್ಗೀಸ್ ಜಿ.ಎಂ.

ಅಲೊವೆರ
ಡಾ. ರಾಜಶೇಖರ್

ಬದುಕು ಬದಲಿಸಿದ ಹೋಲಿಗೆ ವೃತ್ತಿ
ಸಿಸ್ಟರ್ ಲೂಸಿಯ

ವಾರ್ತಾ ವಿಶೇಷ
ಶ್ರೀ ಕ್ಲೆಮೆಂಟ್ ಫರ್ನಾಂಡಿಸ್ ಮತ್ತು ಶ್ರೀ ರಿಚರ್ಡ್ ಮಾರ್ಟಿಸ್

ಮುಖಪುಟ ವಿನ್ಯಾಸ
ಅನೂಷ ಗ್ರಾಫಿಕ್ಸ್

## ಓದುಗರೊಂದಿಗೆ ಕ್ಷಣ ಹೊತ್ತು ...

**ಎಲ್ಲರಿಗೂ 2016, ಹೊಸವರ್ಷದ ಶುಭಾಷಯಗಳು!**

ದಿವಂಗತ ಪ್ರಧಾನಿ ಶ್ರೀ ರಾಜೀವಗಾಂಧಿ ಹೇಳಿದ್ದರು, ಅಭಿವೃದ್ಧಿ ಎಂದರೆ ಕಾರ್ಖಾನೆಗಳನ್ನು ಸ್ಥಾಪಿಸುವುದು, ಅಣೆಕಟ್ಟೆಗಳನ್ನು ನಿರ್ಮಿಸುವುದು  ಅಥವಾ ರಸ್ತೆಗಳ ನಿರ್ಮಾಣ ಮಾತ್ರವಲ್ಲ. ಅಭಿವೃದ್ಧಿಯ ಕುರಿತು ಹೇಳುವಾಗ ಮಾನವ ಅಭಿವೃದ್ಧಿಯೇ ಮುಖ್ಯ ಗುರಿಯಾಗಬೇಕು. ಅದು ಮಾನವನ ಆಧ್ಯಾತ್ಮಿಕ, ಭೌತಿಕ ಮತ್ತು ಸಾಂಸ್ಕೃತಿಕ ಮಟ್ಟದಲ್ಲಿ ಬೆಳವಣಿಗೆ ಆಗಬೇಕು. ಮಹಿಳೆ ಮತ್ತು ಮಕ್ಕಳ ಸ್ವಾಸ್ಥ್ಯಕ್ಕೆ ಪೌಷ್ಠಿಕಾಂಶಭರಿತ ಆಹಾರ ಬಹಳ ಮುಖ್ಯ, ಅದರಲ್ಲೂ ಬೆಳೆಯುತ್ತಿರುವ ಮಕ್ಕಳಿಗೆ ಸಮತೋಲನದ ಆಹಾರ ಲಭಿಸಲೇಬೇಕು.

"ಅಂತಾರಾಷ್ಟ್ರೀಯ ಕಾನೂನಿನಡಿಯಲ್ಲಿ (ವಿಶ್ವಸಂಸ್ಥೆ 1999) ಹಲವು ವಿಷಯಗಳಲ್ಲಿ ಮಾನವನ ಆಹಾರದ ಹಕ್ಕನ್ನು ಪ್ರತಿಪಾದಿಸಲಾಗಿದೆ". ಅದರಲ್ಲೂ ಪ್ರಮುಖವಾಗಿ ಆರ್ಥಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಹಕ್ಕುಗಳ ಪರಿಗಣನೆಯ ಅಂತಾರಾಷ್ಟ್ರೀಯ ಒಡಂಬಡಿಕೆಯ 11ನೇ ವಿಧಿಯಲ್ಲಿ "ಅಪೌಷ್ಠಿಕತೆ ಮತ್ತು ಹಸಿವಿನಿಂದ ಮುಕ್ತಿ ಮೂಲಭೂತ ಹಕ್ಕು" ಎಂದು ವ್ಯಾಖ್ಯಾನಿಸಲಾಗಿದೆ.

ಅಪೌಷ್ಠಿಕತೆಯಿಂದ ಭಾರತದಲ್ಲಿ ಮಕ್ಕಳು, ಮಹಿಳೆಯರು ನರಳುತ್ತಿದ್ದಾರೆ. ಇದು ತಾಯಂದಿರಲ್ಲಿ ಆಹಾರ ಸ್ವೀಕರಣೆಯಲ್ಲಿ ಸ್ವಹಿಂಜರಿತ, ಮಕ್ಕಳ ಆರೈಕೆಯಲ್ಲಿನ ನ್ಯೂನತೆ, ಗರ್ಭಿಣಿಯರಿಗೆ ಪರಿಪೂರ್ಣವಾದ ಆಹಾರ ಪೂರೈಕೆಯ ಕೊರತೆ ಇತ್ಯಾದಿಗಳು ಕಾರಣವಾಗುತ್ತವೆ. 6 ವರ್ಷದೊಳಗಿನ ಪ್ರತಿ ಮಗುವಿಗೆ ಪ್ರತಿದಿನ 300ಕ್ಯಾಲರಿಗೆ ಸಮವಿರುವ ಮತ್ತು 8–10ಗ್ರಾಂ ಪ್ರೋಟಿನ್ ಯುಕ್ತ ಆಹಾರವನ್ನು, ಪ್ರತಿ ಹದಿಹರೆಯದ ಹೆಣ್ಣು ಮಕ್ಕಳಿಗೆ ಪ್ರತಿದಿನ 500ಕ್ಯಾಲರಿಗೆ ಸಮವಿರುವ ಮತ್ತು 20–25ಗ್ರಾಂ ಪ್ರೋಟಿನ್ ಯುಕ್ತ ಆಹಾರವನ್ನು ನೀಡುವುದು. ಪ್ರತಿ ಗರ್ಭಿಣಿ ಮತ್ತು ಬಾಣಂತಿಯರಿಗೆ ಪ್ರತಿದಿನ 500ಕ್ಯಾಲೋರಿಗೆ ಸಮವಿರುವ ಮತ್ತು 20–25 ಗ್ರಾಂ ಪ್ರೋಟಿನ್‌ಯುಕ್ತ ಆಹಾರವನ್ನು 300 ದಿನಗಳ ಕಾಲ ಪಡೆಯಬೇಕು.

ಮಕ್ಕಳಲ್ಲಿನ ಅಪೌಷ್ಠಿಕಾಂಶವು ದೇಹದ ಪ್ರತಿರೋಧಕ ಶಕ್ತಿಯನ್ನು ಕುಂದಿಸಿ ವಿವಿಧ ರೋಗಗಳಿಗೆ ಆಸ್ಪದ ಮಾಡಿಕೊಡುತ್ತದೆ. 2.10 ಮಿಲಿಯನ್ ಕಡಿಮೆ ತೂಕದ ಐದು ವರ್ಷದ ಒಳಗಿನ ಮಕ್ಕಳು ಪ್ರತಿ ವರ್ಷ ದೇಶದಲ್ಲಿ ಸಾವಿಗೀಡಾಗುತ್ತಿವೆ. ಪ್ರತಿ 10 ರಲ್ಲಿ 7 ಮಕ್ಕಳು, ಭೇದಿ, ನ್ಯೂಮೊನಿಯಾ, ದಢಾರ ರೋಗಗಳು ಬಾಧಿಸಿ ಸಾವನ್ನಪ್ಪುತ್ತಿವೆ. ಪರಿಶಿಷ್ಟ ಪಂಗಡ ಮತ್ತು ಪರಿಶಿಷ್ಟ ಜಾತಿಗಳಲ್ಲಿ ಅತ್ಯಂತ ಹೆಚ್ಚು ಪ್ರಮಾಣ ಕಂಡುಬಂದಿದೆ. ಈ ಅಂಕಿಸಂಖ್ಯೆಗಳು ಒಟ್ಟಾರೆ ಅಪೌಷ್ಠಿಕಾಂಶದ ಗಂಭೀರ ಸ್ಥಿತಿಯನ್ನು ತೋರಿಸುತ್ತದೆ. (ಯೋಜನಾ ಡಿಸೆಂಬರ್ 2013)

ಪೌಷ್ಠಿಕಾಂಶದ ಕೊರತೆ ಸುಧಾರಿಸುವ ನಿಟ್ಟಿನಲ್ಲಿ ಸರಕಾರಗಳು ಹಲವಾರು ಕಾರ್ಯಕ್ರಮಗಳನ್ನು ಹಾಕಿಕೊಂಡು ಸುಧಾರಣೆ ತರಲುಪ್ರಯತ್ನಿಸುತ್ತಿವೆ. ಬಡತನ ರೇಖೆಗಿಂತ ಕೆಳಗಿನ ಜನರಿಗೆ ರಿಯಾಯತಿ ದರದಲ್ಲಿ ಆಹಾರ ಧಾನ್ಯಗಳನ್ನು ವಿತರಿಸುತ್ತಿದೆ. ಕರ್ನಾಟಕವೂ ಸಹ ಆಹಾರ ಭದ್ರತಾ ಅಭಿಯಾನದಲ್ಲಿ ಒಂದು ಹೆಜ್ಜೆ ಮುಂದೆ ಹೋಗಿ 'ಅನ್ನಭಾಗ್ಯ' ಕಾರ್ಯಕ್ರಮಕ್ಕೆ ಚಾಲನೆ ನೀಡಿದೆ. ಅಲ್ಲದೇ ಪೌಷ್ಠಿಕಾಂಶ ಸೇವನೆಯನ್ನು ಸುಧಾರಿಸಲು ಶಾಲಾ ಮಕ್ಕಳಿಗೆ ಮಧ್ಯಾಹ್ನದ ಬಿಸಿ ಊಟ ಹಾಗೂ ಹಾಲು ವಿತರಿಸುವ 'ಕ್ಷೀರ ಭಾಗ್ಯ' ಕಾರ್ಯಕ್ರಮವನ್ನು ಸಹ ಪ್ರಾರಂಭಿಸಲಾಗಿದೆ.

ಎಲ್ಲರಿಗೂ ಸಾಕಷ್ಟು ಅಹಾರ ಲಭಿಸಲಿ ಎಂದು ಆಶಿಸುವಾಗ, ಪೌಷ್ಠಿಕಾಂಶಯುಕ್ತ ಆಹಾರದ ಲಭ್ಯತೆಗೆ ಆದ್ಯತೆ ಇರಲಿ. ಪೌಷ್ಠಿಕಾಂಶವಿಲ್ಲದ ಆಹಾರವು ದೇಹಕ್ಕೆ ಚೈತನ್ಯ ಒದಗಿಸಲಾರದು. ಅದು ವಿವಿಧ ರೋಗಗಳಿಗೆ ಅವಕಾಶ ನೀಡಿ ಸಮಾಜದ ಸ್ವಾಸ್ಥತೆಯನ್ನು ಹಾಳುಗೆಡವುತ್ತದೆ. ಆದುದರಿಂದ, ಸರಕಾರಗಳು ಅದರಲ್ಲೂ ಸ್ಥಳೀಯ ಸರಕಾರಗಳು ಎಲ್ಲಾ ಜನರಿಗೆ ಪ್ರಮುಖವಾಗಿ ಬಡವರಿಗೆ ಆಹಾರ ಭದ್ರತೆಯನ್ನು ಒದಗಿಸಿ ಪೌಷ್ಠಿಕಾಂಶ ಭರಿತ ಆಹಾರದ ಲಭ್ಯತೆಯ ಬಗ್ಗೆ ಖಾತರಿವಹಿಸಬೇಕಾಗುತ್ತದೆ. ಹೀಗೆ ಮೂಲಭೂತ ಹಕ್ಕುಗಳಿಂದ ವಂಚಿಸಲ್ಪಟ್ಟ ಮುಖ್ಯವಾಗಿ ಆಹಾರದ ಹಕ್ಕಿನಿಂದ ವಂಚಿತರಾದ ಲಕ್ಷಾಂತರ ಜನರಿಗೆ ಪೌಷ್ಠಿಕಾಂಶಯುಕ್ತ ಆಹಾರದ ಲಭ್ಯತೆಯಾಗಲಿ ಎಂದು ಆಶಿಸೋಣ.

ಫಾ. ಸೆಬಾಸ್ಟಿಯನ್ ಫರ್ನಾಂಡಿಸ್
ನಿರ್ದೇಶಕರು, ಕ್ರಾಸ್ ಸಂಸ್ಥೆ.

# ಮಗುವಿನ ಸಮಗ್ರ ಬೆಳವಣಿಗೆಗೆ ಪೂರಕ ಪೌಷ್ಠಿಕ ಆಹಾರ

ವರ್ಗೀಸ್ ಜಿ.ಎಮ್.

ಇಂಗ್ಲ ಕವಿ ಜಾನ್ ಮಿಲ್ಟನ್ ಒಂದೆಡೆ ಹೀಗೆ ಹೇಳುತ್ತಾರೆ "ಮುಂಜಾವು ದಿನವನ್ನು ತೋರಿಸಿದಂತೆ, ಬಾಲ್ಯ ಮನುಷ್ಯನನ್ನು ತೋರಿಸುತ್ತದೆ". ಮಕ್ಕಳ ಚಾಚ ಎನಿಸಿದ ಭಾರತದ ಪ್ರಥಮ ಪ್ರಧಾನಮಂತ್ರಿಗಳಾಗಿದ್ದ ಪಂಡಿತ ಜವಾಹರಲಾಲ ನೆಹರೂರವರು ಮಕ್ಕಳ ಕುರಿತು ಹೀಗೆ ಹೇಳಿದ್ದಾರೆ "ನಾವು ಭಾರತದ ಭವಿಷ್ಯವನ್ನು ನೋಡುವಾಗ ನಕ್ಷತ್ರ ಗ್ರಹಗಳನ್ನು ನೋಡುವುದಿಲ್ಲ, ಮುದ್ದು ಮಕ್ಕಳ ಕಣ್ಣುಗಳನ್ನು ನೋಡುತ್ತೇವೆ, ಆ ಕಣ್ಣುಗಳಲ್ಲಿ ಪ್ರಕಾಶವಿದ್ದರೆ ನಮ್ಮ ದೇಶದ ಭವಿಷ್ಯ ಉಜ್ವಲವಾಗಿರುತ್ತದೆ. ಆ ಕಣ್ಣುಗಳಲ್ಲಿ ಕಣ್ಣೀರು ತುಂಬಿದ್ದರೆ ಭಾರತಕ್ಕೆ ಭವಿಷ್ಯವಿರುವುದಿಲ್ಲ". "ಆರೋಗ್ಯವಂತ ಶಿಶು, ಸಮಾಜದ ಸಂಪತ್ತು" "ಬೆಳೆಯುವ ಸಿರಿ ಮೊಳಕೆಯಲ್ಲೇ" ಎಂಬ ನಾಣ್ನುಡಿಯೊಂದು ಕನ್ನಡದಲ್ಲಿ ಇದೆ. ಈ ಬೆಳೆಯುವ ಸಿರಿಯನ್ನು ಮೊಳಕೆಯಲ್ಲೇ ಜೋಪಾನ ಮಾಡಿ ಸದೃಢವಾಗಿ ಬೆಳೆಸುವುದು ನಮ್ಮೆಲ್ಲರ ಜವಾಬ್ದಾರಿ.

ಮಕ್ಕಳಿಗೆ ಪೌಷ್ಠಿಕಾಂಶಯುಕ್ತ ಆಹಾರ ನೀಡುವುದು ನಮ್ಮ ಆದ್ಯ ಕರ್ತವ್ಯವಾಗಿದೆ. ಮಕ್ಕಳು ಪೌಷ್ಠಿಕಾಂಶವುಳ್ಳ ಆಹಾರ ಪದಾರ್ಥಗಳನ್ನು ಸೇವಿಸದಿದ್ದರೆ ಅವರ ಶರೀರವು ಸಾಮಾನ್ಯವಾದ ರೀತಿಯಲ್ಲಿ ಬೆಳವಣಿಗೆಯಾಗುವುದಿಲ್ಲ. ವಿವಿಧ ರೋಗಗಳಿಗೂ ಇದು ಕಾರಣವಾಗುತ್ತದೆ. ಪೋಷಕಾಂಶಗಳ ಕೊರತೆ ಅಂಗವಿಹೀನತೆಯನ್ನೂ ಉಂಟು ಮಾಡುತ್ತದೆ.

ಮಕ್ಕಳನ್ನು ಶಾಲೆಗೆ ಕಳುಹಿಸುವ ಭರದಲ್ಲಿ ಅವರ ಮಧ್ಯಾಹ್ನದ ಊಟದ ಬಾಕ್ಸಿಗೆ ಸಿಕ್ಕ ಸಿಕ್ಕ ಜಂಕ್ ತಿಂಡಿ ತಿನಿಸುಗಳನ್ನು ತುಂಬಿ ಪೋಷಕರು ಮಕ್ಕಳ ಆರೋಗ್ಯ ಹಾಳು ಮಾಡುತ್ತಿದ್ದಾರೆ. ಜಂಕ್ ತಿಂಡಿ ತಿನಿಸುಗಳನ್ನು ಕೊಡುವುದರಿಂದ ಬೊಜ್ಜು ಬೆಳೆದು, ಕೊಲೆಸ್ಟ್ರಾಲ್ ಶೇಖರಣೆಯಾಗಿ ರಕ್ತದೊತ್ತಡ ಮತ್ತು ಮಧು ಮೇಹಕ್ಕೆ ದಾರಿ ಮಾಡಿಕೊಡುತ್ತದೆ. ಜೊತೆಗೆ ಅಪೌಷ್ಠಿಕತೆ ಕಾಡಬಹುದು. ಅಂಕಿ ಅಂಶಗಳ ಪ್ರಕಾರ ನಮ್ಮ ದೇಶದಲ್ಲಿ ಶೇಕಡ 20 ರಷ್ಟು ಶಾಲಾ ಮಕ್ಕಳು ಪೌಷ್ಠಿಕ ಆಹಾರದ ಕೊರತೆಗೆ ತುತ್ತಾಗಿರುವ ಸಂಗತಿ ಆತಂಕ ಸೃಷ್ಟಿಸಿದೆ. ಈ ಸಂದರ್ಭದಲ್ಲಿ ಮಕ್ಕಳಿಗೆ ಎಂಥಹ ಆಹಾರ ಕೊಡಬೇಕು ಏನನ್ನು ಕೊಡಬಾರದು ಎಂಬುದರ ಬಗ್ಗೆ ಸಾಕಷ್ಟು ಚರ್ಚೆಗಳು ನಡೆದಿದೆ. ಐದು ವರ್ಷದೊಳಗಿನ ಮಕ್ಕಳ ಸಾವಿಗೆ



ಅಪೌಷ್ಠಿಕತೆಯು ಸುಮಾರು 1/3ರಷ್ಟು ಕಾರಣವಾಗಿದೆ. ನಮ್ಮ ದೇಶದಲ್ಲಿ 43 ಶೇಕಡ ಮಕ್ಕಳು ಕಡಿಮೆ ತೂಕದವರೆಂದು ಅಂದಾಜಿಸಲಾಗಿದೆ. ಮಕ್ಕಳ ಬೆಳವಣಿಗೆಗೆ ಹುಟ್ಟಿದಾಗಿನಿಂದ ಎರಡು ವರ್ಷವು ಅತ್ಯಂತ ನಿರ್ಣಾಯಕವಾಗಿರುತ್ತದೆ. ಶಿಶುಗಳು ಹಾಗೂ ಎಳೆಯ ಮಕ್ಕಳ ಆಹಾರ ಪದ್ಧತಿಗಳ ಸರಿಯಾದ ಅನುಷ್ಠಾನದಿಂದ ಅವರ ಉಳಿವು ಹಾಗೂ ದೈಹಿಕ ಮತ್ತು ಮಾನಸಿಕ ಬೆಳವಣಿಗೆಗೆ ಅನುಕೂಲವಾಗುತ್ತದೆ.

ಸೆಪ್ಟಂಬರ್ 1ರಿಂದ 7ರವರೆಗೆ **"ನ್ಯಾಷಿನಲ್ ನ್ಯೂಟ್ರಿಷನ್ ವೀಕ್"** ಆಚರಿಸಲಾಯಿತು. ಪೌಷ್ಠಿಕಾಂಶಯುಕ್ತ ಆಹಾರವನ್ನು ನಾವು ಸ್ಥಳೀಯವಾಗಿ ಉತ್ಪಾದಿಸಬೇಕು. ಆಹಾರದ ಕುರಿತಂತೆ ನಮ್ಮಲ್ಲಿ ವೈವಿಧ್ಯಮಯ ಚಿತ್ರಣವಿದೆ. ಅಹಾರ ನಮ್ಮಲ್ಲಿ ಸಾಕಷ್ಟು ಉತ್ಪಾದನೆಯಾಗುತ್ತಿದೆ. ಆದರೆ ರೈತ ಬೆಳೆದ ಆಹಾರಧಾನ್ಯಗಳನ್ನು ಸುರಕ್ಷಿತವಾಗಿಡಲು ಯೋಗ್ಯ ಸಂಗ್ರಹಗಾರ ಕೊರತೆ ಇರುವ ಕಾರಣ ಕೊಳೆಯುವುದು, ಹುಳ ಹಿಡಿಯುವುದು, ಇಲಿಹೆಗ್ಗಣ ಮತ್ತು ಇತರ ಕ್ರಿಮಿಕೀಟಗಳಿಂದ ನಾಶವಾಗಿ, ಕೈಗೆ ಬಂದಿದ್ದು ಬಾಯಿಗೆ ಬರುವ ಮುಂಚೆ



ಜಾರಿಹೋಗುತ್ತಿದೆ. ಇನ್ನೊಂದು ಬದಿಯಲ್ಲಿ ಹಸಿವಿನಿಂದ ಸಾಯುವ, ಪೌಷ್ಠಿಕಾಂಶದಿಂದ ಬಳಲುವ, ಮಕ್ಕಳ ಪ್ರಮಾಣ ಕಡಿಮೆ ಮಾಡಲು ಶ್ರಮ ನಡೆಯುತ್ತಲೇ ಇದೆ. ನಮ್ಮ ದೇಶದಲ್ಲಿ ಒಂದಷ್ಟು ಶೇಕಡ ಜನರು ಅತ್ಯಂತ ವೈಭವಯುತ ಬದುಕು ಸಾಗಿಸುವ, ತಿಂದದ್ದನ್ನು ಅರಗಿಸಿಕೊಳ್ಳುವುದೇ ದೊಡ್ಡ ಸವಾಲಾಗಿ, ತಡಕಾಡಿ, ಔಷಧಿ ಮಾತ್ರೆಗಳಿಗೆ ಶರಣಾಗಿ, ಆಹಾರ ಜೀರ್ಣಿಸಿಕೊಂಡು ನಿಟ್ಟುಸಿರು ಬಿಡುವವರಿದ್ದಾರೆ.

**ಜಾಗತಿಕ ಹಸಿವಿನ ಸೂಚ್ಯಂಕ 2012**– ನಡೆಸಿದ ಸಮೀಕ್ಷೆ, ಮೂರು ಮುಖ್ಯ ವಿಷಯಗಳನ್ನು ಗಮನವಿರಿಸಿ ಅಧ್ಯಯನ ನಡೆಸಿತು. ಒಂದನೆಯದು ಸತ್ವಭರಿತ ಆಹಾರದ ಕೊರತೆಯ ಜನಸಮೂಹದ ಪ್ರಮಾಣ, ಎರಡನೆಯದು ಶಿಶು ಮರಣ ಪ್ರಮಾಣ ಮತ್ತು ಮೂರನೆಯದು ಪೌಷ್ಠಿಕಾಂಶದ ಕೊರತೆಯಿಂದ ಬಳಲುವ ಮಕ್ಕಳ ಪ್ರಮಾಣ. ಈ ಮೂರು ಸಂಗತಿಗಳನ್ನು ಆಧರಿಸಿ ಮಾಡಲಾದ ಸಮೀಕ್ಷೆಯ ಪ್ರಕಾರ 79 ರಾಷ್ಟ್ರಗಳ ಪೈಕಿ ಭಾರತ 65 ನೇ ಸ್ಥಾನದಲ್ಲಿರುವ ಬಗ್ಗೆ ವರದಿಯಾಗಿದೆ.

ಸತ್ವಭರಿತ ಆಹಾರ ಮತ್ತು ಅಭಿವೃದ್ಧಿ ಸೂಚ್ಯಂಕದ ವಿಷಯದಲ್ಲಿ ದೇಶದ 12 ರಾಜ್ಯಗಳನ್ನು ಆಯ್ಕೆಮಾಡಿಕೊಂಡು ಅಧ್ಯಯನ ಮಾಡಲಾಗಿದೆ. ಅದರಲ್ಲಿ 10 ರಾಜ್ಯಗಳ ಶ್ರೇಣಿ ಹೀಗಿದೆ. ಮೊದಲ ಸ್ಥಾನದಲ್ಲಿ ಕೇರಳ, ಎರಡನೆಯ ಸ್ಥಾನ ಹರ್ಯಾಣ, ಮೂರನೆಯ ಸ್ಥಾನದಲ್ಲಿ ತಮಿಳುನಾಡು, ನಾಲ್ಕನೆಯ ಸ್ಥಾನವನ್ನು ಗುಜರಾತ, ಐದನೆಯ ಸ್ಥಾನದಲ್ಲಿ ಮಹಾರಾಷ್ಟ್ರ, ಆರನೆಯ ಸ್ಥಾನದಲ್ಲಿ ಕರ್ನಾಟಕ, ಏಳನೆಯ ಸ್ಥಾನದಲ್ಲಿ ಆಂಧ್ರಪ್ರದೇಶ, ಎಂಟನೆಯ ಸ್ಥಾನದಲ್ಲಿ ಅಸ್ಸಾಂ, ಒಂಭತ್ತನೆಯ ಸ್ಥಾನದಲ್ಲಿ ಒಡಿಸ್ಸಾ ಮತ್ತು ಹತ್ತನೆಯ ಸ್ಥಾನದಲ್ಲಿ ರಾಜಸ್ಥಾನ ಇದೆ.

ಭಾರತದಲ್ಲಿ ಪೌಷ್ಠಿಕತೆಯ ಕೊರತೆ ಮತ್ತು ಕಡಿಮೆ ತೂಕದ ಮಕ್ಕಳ ವಿಷಯವನ್ನು ಗಣನೆಗೆ ತೆಗೆದುಕೊಂಡಾಗ, 21.7 ಕೋಟಿ ಜನಸಂಖ್ಯೆಯಷ್ಟು ಜನ ಪೌಷ್ಠಿಕ ಆಹಾರದ ಕೊರತೆಯಿಂದ ಬಳಲುವ

ಬಗ್ಗೆ ಸಮೀಕ್ಷೆಯಲ್ಲಿ ವರದಿಯಾಗಿದೆ. ಸತ್ವಭರಿತ ಆಹಾರದ ಕೊರತೆಯಿಂದ ಸಾಯುವವರ ಪ್ರಮಾಣ ಹೆಚ್ಚಾಗಿದೆ. ಇದನ್ನೇ ಗಮನದಲ್ಲಿರಿಸಿ ಮಾಜಿ ಪ್ರಧಾನಮಂತ್ರಿಗಳಾಗಿದ್ದ ಶ್ರೀ ಮನಮೋಹನ ಸಿಂಗ್ ಅವರು ನಮ್ಮಲ್ಲಿ ಹಸಿವು ಮತ್ತು ಅಪೌಷ್ಟಿಕತೆ ಎನ್ನುವುದು ರಾಷ್ಟ್ರ ತಲೆತಗ್ಗಿಸುವಂತಿದೆ ಎಂದಿದ್ದರು. ಆಗಿನ ಪರಿಸ್ಥಿತಿಯನ್ನು ಗಮನದಲ್ಲಿರಿಸಿಕೊಂಡೇ ರಾಷ್ಟ್ರೀಯ ಆಹಾರ ಭದ್ರತಾ ಮಸೂದೆ 2013 ಜಾರಿಗೆ ತರಲಾಯಿತು.

## ಮಕ್ಕಳಲ್ಲಿ ಪೌಷ್ಟಿಕತೆ ಎಂದರೇನು?

ಶಿಶು ಹಾಗೂ ಎಳೆಯ ಮಕ್ಕಳ ಸರಿಯಾದ ಆಹಾರ ಪದ್ಧತಿ ಎಂದರೆ ಎಲ್ಲರಿಗೂ ತಿಳಿದಿರುವಂತಹ ಹಾಗೂ ಸಾಮಾನ್ಯವಾಗಿ ಒಪ್ಪುವಂತಹ ಸೂಕ್ತ ಆಹಾರವನ್ನು ನವಜಾತ ಶಿಶುವಿಗೆ ಮತ್ತು 2 ವರ್ಷದೊಳಗಿನ ಎಳೆಯ ಮಕ್ಕಳಿಗೆ ನೀಡುವುದು ಎಂದಾಗಿದೆ. ಮೊದಲನೆಯದಾಗಿ ಶಿಶು ಜನಿಸಿದ ಒಂದು ಗಂಟೆಯ ಒಳಗೆ ಎದೆಹಾಲುಣಿಸುವಿಕೆ, 6 ತಿಂಗಳವರೆಗೆ ಬರಿಯ ಎದೆಹಾಲುಣಿಸುವುದು ಹಾಗೂ 6 ತಿಂಗಳಿನಿಂದ 2 ವರ್ಷದವರೆಗೆ ಎದೆಹಾಲಿನ ಜೊತೆಗೆ ಪೂರಕ ಆಹಾರವಾದ ಬೇಳೆಯ ತಿಳಿ, ಹಣ್ಣಿನ ರಸ, ಚೆನ್ನಾಗಿ ಬೇಯಿಸಿದ ತರಕಾರಿ ಇವುಗಳನ್ನು ನೀಡುವುದು ಮತ್ತು ಕೊಬ್ಬಿನ ಅಂಶವಿರುವ ಎಣ್ಣೆ ಅಥವಾ ತುಪ್ಪವನ್ನು ಸೇರಿಸಬೇಕು.

## ಮಕ್ಕಳಲ್ಲಿನ ಅಪೌಷ್ಟಿಕತೆಯನ್ನು ಕಂಡು ಹಿಡಿಯುವ ಬಗೆ ಹೇಗೆ?

ಜನಿಸಿದಾಗ ಮಗು ಕಡಿಮೆ ತೂಕವನ್ನು ಹೊಂದಿರುತ್ತದೆ ಹಾಗು ಮಗು ಬೆಳೆಯುತ್ತಾ ವಯಸ್ಸಿಗೆ ತಕ್ಕ ತೂಕವನ್ನು ಹೊಂದಿರುವುದಿಲ್ಲ. ಪದೇ ಪದೇ ವಾಂತಿ ಭೇಧಿ ಅಥವಾ ತೀವ್ರ ಶಾಸಕೋಶದ ಸೋಂಕು ತಗಲುತ್ತಿರುವ ಮಕ್ಕಳು ಇತ್ಯಾದಿ,.

## ಮಕ್ಕಳಲ್ಲಿನ ಅಪೌಷ್ಟಿಕತೆಯ ಲಕ್ಷಣಗಳು:

ಕ್ರಮಬದ್ಧವಾಗಿ ಪೌಷ್ಠಿಕ ಆಹಾರವನ್ನು ಸೇವಿಸಿದ ಗರ್ಭಿಣಿ ಮಹಿಳೆ ಆರೋಗ್ಯ ಯುಕ್ತ ಮಗವಿಗೆ ಜನನ ನೀಡುತ್ತಾಳೆ. ಅಪೌಷ್ಟಿಕತೆಯಿಂದ ನರಳುವ ಮಕ್ಕಳಲ್ಲಿ ಮಾಂಸಖಂಡಗಳು ಬಲಹೀನವಾಗಿ ಮಗು ತೆಳ್ಳಗಾಗುತ್ತದೆ ಅಥವಾ ಮಾಂಸ ಮೂಳೆಗೆ ಅಂಟಿಕೊಂಡಿರುತ್ತದೆ ಹೊಟ್ಟೆಯು ದಪ್ಪವಾಗಿ ಎದ್ದು ಕಾಣುತ್ತದೆ. ಮಗುವಿಗೆ ಯಾವ ಚಟುವಟಿಕೆಯಲ್ಲೂ ಆಸಕ್ತಿ ಇರುವುದಿಲ್ಲ. ವಯಸ್ಸಿಗೆ ತಕ್ಕ ಬೆಳವಣಿಗೆ ಇರುವುದಿಲ್ಲ. ಕಾಲು ಬಾವು, ಕೂದಲು ಕಂದು ಬಣ್ಣಕ್ಕೆ ತಿರುಗಿರುತ್ತವೆ ಮತ್ತು ಕೂದಲು ಉದುರುವುದು. ತೀವ್ರ ಬಲಹೀನತೆ, ಪಾದ ಹಾಗೂ ಮುಖದಲ್ಲಿ ಊತ, ಅತಿಸಾರ ಭೇದಿ ಕಾಣಿಸಿಕೊಳ್ಳುತ್ತಿರುತ್ತದೆ. ಮಗುವಿನಲ್ಲಿ ಕಾಣಿಸಿಕೊಳ್ಳಬಹುದಾದ ಇತರ ತೊಂದರೆಗಳು ಮಗು ವಯಸ್ಸಿಗೆ ತಕ್ಕ ತೂಕ ಮತ್ತು ಎತ್ತರ ಇರುವುದಿಲ್ಲ. ಮಾಸಿಕ ಬೆಳವಣಿಗೆ ಕುಂಠಿತವಾಗಿರುತ್ತದೆ. ಮಗುವಿಗೆ ಹಸಿವು ಕಡಿಮೆಯಾಗುವುದು ಹಾಗೂ ಬೇಗ ಆಯಾಸಗೊಳ್ಳುವುದು. ಮಗುವಿನ ಮುಖ ಊದಿಕೊಂಡಿರುತ್ತದೆ.

## ಅಪೌಷ್ಟಿಕತೆಯಿಂದ ಬರಬಹುದಾದ ಕಾಯಿಲೆಗಳು/ ಸೋಂಕುಗಳು:

ಅಪೌಷ್ಟಿಕತೆಯಿಂದ ಬಳಲುತ್ತಿರುವ ಮಗು ರಕ್ತ ಹೀನತೆಯಿಂದ ಬಳಲುತಿದ್ದು ರೋಗ ನಿರೋಧಕ ಶಕ್ತಿ ಕುಂಠಿತವಾಗಿರುತ್ತದೆ. ಅತಿಸಾರ, ವಾಂತಿ, ನ್ಯುಮೋನಿಯಾ ಸೋಂಕುಗಳು ಮಗುವಿನಲ್ಲಿ ಪದೇ ಪದೇ ಕಾಣಿಸಿಕೊಳ್ಳಬಹುದು.

## ಮಕ್ಕಳಲ್ಲಿನ ಅಪೌಷ್ಟಿಕತೆಗೆ ಕಾರಣಗಳು:

ಮಹಿಳೆಯರಲ್ಲಿ ಅನಕ್ಷರತೆ, ತಾಯಿಯ ಅಪೌಷ್ಟಿಕತೆ, ಆರೋಗ್ಯ ಶಿಕ್ಷಣದ ಕೊರತೆ, ಶಿಶುವಿಗೆ ಸಮರ್ಪಕವಾಗಿ ಎದೆಹಾಲು ಉಣಿಸದೇ ಇರುವುದು, ಬಡತನ, ಲಿಂಗ ತಾರತಮ್ಯ, ಬಾಲ್ಯ ವಿವಾಹ ಹಾಗೂ ಎಳೆಯ ವಯಸ್ಸಿನಲ್ಲಿ ಗರ್ಭಧಾರಣೆ, ಪೂರಕ ಪೌಷ್ಠಿಕ ಆಹಾರವನ್ನು ನೀಡದೇ ಇರುವುದು, ಅಸಮರ್ಪಕ ಅಡುಗೆ ಪದ್ಧತಿ ಮತ್ತು ಸ್ವಚ್ಛತೆ ಅನುಸರಿಸದಿರುವುದು ಪ್ರಮುಖ ಕಾರಣಗಳಾಗಿವೆ.

ಅಪೌಷ್ಟಿಕತೆಗೆ ಕಾರಣವಾಗುವ ಮೂಢನಂಬಿಕೆಗಳಿಂದಾಗಿ ಮಗು ಹುಟ್ಟಿದ ಅರ್ಧಗಂಟೆಯೊಳಗೆ ಮೊದಲ ಎದೆಹಾಲನ್ನು ಕುಡಿಸದೇ ಇರುವುದು. ಇದು ಸೂತಕದ ಹಾಲು ಎಂಬ ಮೂಢನಂಬಿಕೆ. ಪೂರಕ ಪೌಷ್ಟಿಕ ಆಹಾರವನ್ನು ಮಗುವಿಗೆ 6 ತಿಂಗಳಾದ ನಂತರ ತಕ್ಷಣ ಪ್ರಾರಂಭಿಸದೇ ಇರುವುದು ಇತ್ಯಾದಿ,.

## ಅಪೌಷ್ಟಿಕತೆ ನಿರ್ಮೂಲ ಮಾಡುವುದು ಹೇಗೆ?

ಎದೆ ಹಾಲಿನಲ್ಲಿರುವ ಕೊಲೆಸ್ಟ್ರಮ್ (ಗಿಣ್ಣು ಹಾಲು) ನಿಂದ ಮಗುವಿಗೆ ರೋಗ ನಿರೋಧಕ ಶಕ್ತಿ ಹೆಚ್ಚಾಗುತ್ತದೆ. ಮಗು ಹುಟ್ಟಿದ ಅರ್ಧಗಂಟೆಯೊಳಗೆ ಮೊದಲ ಎದೆಹಾಲನ್ನು ಕುಡಿಸುವುದರಿಂದ ಅದರಲ್ಲಿರುವ ಕೊಲೆಸ್ಟ್ರಮ್‌ನಿಂದ ಮಗುವಿಗೆ ರೋಗ ನಿರೋಧಕ ಶಕ್ತಿ ಹೆಚ್ಚಾಗುತ್ತದೆ. ಮಗು ಹುಟ್ಟಿದ ಆರು ತಿಂಗಳವರೆಗೆ ಕಡ್ಡಾಯವಾಗಿ ಎದೆಹಾಲು ನೀಡುವುದರಿಂದ ಯಾವುದೇ ಸೋಂಕು ಬಾರದಂತೆ ತಡೆಯಬಹುದು.

ಮಗುವಿಗೆ ಆರು ತಿಂಗಳ ನಂತರ ಎದೆಹಾಲಿನ ಜತೆಗೆ ಪೂರಕ ಆಹಾರವಾದ ಬೇಳೆಯ ತಿಳಿ, ಹಣ್ಣಿನ ರಸ, ಚೆನ್ನಾಗಿ ಬೇಯಿಸಿದ ತರಕಾರಿ ಇವುಗಳನ್ನು ನೀಡುವುದು. ಈ ಪೂರಕ ಆಹಾರದೊಂದಿಗೆ ಮಗುವಿಗೆ 2 ವರ್ಷಗಳು ತುಂಬುವವರೆಗೂ ಎದೆಹಾಲು ಉಣಿಸುವುದು ಕಡ್ಡಾಯ. 5 ವರ್ಷಗಳು ತುಂಬುವವರೆಗೂ ಪ್ರತಿ ತಿಂಗಳು ತೂಕ ಮಾಡಿಸಿ ಮಗುವಿನ ತೂಕ ಹೆಚ್ಚಾಗುತ್ತಿರುವ ಬಗ್ಗೆ ಖಾತ್ರಿ ಪಡಿಸಿಕೊಳ್ಳಬೇಕು.

ಬೆಳಗ್ಗೆ 8ಗಂಟೆಯ ಒಳಗೆ ಒಂದು ಲೋಟಾ ಹಾಲು, ಬಾಳೆ ಹಣ್ಣು ಕೊಡಿ. ಊಟದ ಡಬ್ಬದಲ್ಲಿಯೂ ತಾಜಾ ಹಣ್ಣು ಮತ್ತು ತರಕಾರಿ ಹಾಗೂ ಮೊಟ್ಟೆಯೂ ಕೊಡಬಹುದು. ಮಕ್ಕಳಿಗೆ ಕೊಡುವ ಆಹಾರದಲ್ಲಿ ರಾಗಿ, ಜೋಳ, ಗೋಧಿಯಿಂದ ಮಾಡಿದ ಆಹಾರವೂ ಮುಖ್ಯವಾಗಿರಬೇಕು. ದಿನ ನಿತ್ಯವೂ ಮಕ್ಕಳ ಆರೋಗ್ಯಕ್ಕೆ ಸಹಕಾರಿಯಾದ ಆಹಾರ ನೀಡುವಲ್ಲಿ ಪೋಷಕರ ಗಮನವಿರಲಿ.

## ಪೌಷ್ಟಿಕ ಪುನರ್ವಸತಿ ಕೇಂದ್ರಗಳು:

ಅಪೌಷ್ಟಿಕತೆಯನ್ನು ತೀವ್ರವಾಗಿ ಅನುಭವಿಸುತ್ತಿರುವ ಮಕ್ಕಳಿಗೆ ಆರೋಗ್ಯ ಇಲಾಖೆಯ ವತಿಯಿಂದ ಪೌಷ್ಟಿಕ ಪುನರ್ವಸತಿ ಕೇಂದ್ರ (ಎನ್ ಆರ್ ಸಿ)ಗಳನ್ನು ಪ್ರಾರಂಭಿಸಲಾಗಿದೆ. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ 'ಸಮಗ್ರ ಶಿಶು ಅಭಿವೃದ್ಧಿ ಯೋಜನೆಯಡಿ ತೀವ್ರ ಅಪೌಷ್ಟಿಕ ಮಕ್ಕಳಿಗೆ ಪ್ರತಿ ದಿನ ರೂ. 6.90 ಮೌಲ್ಯದ ಪೂರಕ ಪೌಷ್ಟಿಕ ಆಹಾರವನ್ನು ನೀಡಲಾಗುತ್ತಿದೆ. ತುರ್ತು ಚಿಕಿತ್ಸೆಯ ಅಗತ್ಯವಿರುವ ಮಕ್ಕಳಿಗೆ ಬಾಲಸಂಜೀವಿನಿ ಯೋಜನೆಯಡಿ ರಾಜ್ಯದ 15 ಆಸ್ಪತ್ರೆಗಳ ಮೂಲಕ ಗುರುತಿಸಿರುವ 18 ಕಾಯಿಲೆಗಳಿಗೆ ಚಿಕಿತ್ಸೆ ನೀಡಲಾಗುತ್ತಿದೆ'.

6ನೇ ಪುಟದಲ್ಲಿ ಮುಂದುವರಿಯುವುದು . . . . . . .

# ಅಲೊೂವೆರ

**ಡಾ. ರಾಜಶೇಖರ್**

'ಅಲೋವೆರ' ಒಂದು ಕತ್ತಾಳೆಯ ಗುಂಪಿಗೆ ಸೇರಿದ ಬಹು ಉಪಯೋಗಿ ಗಿಡ. ಇದರ ಮೂಲ ಪೂರ್ವ ಆಫ್ರಿಕ ಹಾಗೂ ಮೆಡಿಟರೇನಿಯನ್ ರಾಷ್ಟ್ರಗಳು. ಇದು ಲಿಲಿಯೇಸಿಯೆ ಎಂಬ ಗುಂಪಿಗೆ ಸೇರಿದ ರಸವತ್ತಾದ ಗಿಡ. ಇದರಲ್ಲಿ ಸುಮಾರು 500 ಕ್ಕೂ ಅಧಿಕ ಪ್ರಭೇಧಗಳಿದ್ದು ಪ್ರಪಂಚದಾದ್ಯಂತ ಹರಡಿಕೊಂಡಿರುತ್ತದೆ. ಇದರ ಉಪಯೋಗಗಳು ಹಲವು, ಔಷಧಿಯಾಗಿ, ಅಲಂಕಾರಿಕವಾಗಿ, ಅಂದಕ್ಕಾಗಿ ಈ ಗಿಡವನ್ನು ಕೊಂಡಗಳಲ್ಲಿಯೂ ಸಹ ಬೆಳೆಯಬಹುದಾಗಿದೆ. ಈ ಗಿಡವನ್ನು ಪ್ರಥಮ ಚಿಕಿತ್ಸಾ ಗಿಡ, ಜಾದೂ ಹಾಗೂ ಚಮತ್ಕಾರಿ ಗಿಡ ಎಂದು ಕರೆಯಲಾಗುತ್ತಿದೆ.

ಈ ಗಿಡದ ಬಗ್ಗೆ ಹೊಸ ಒಡಂಬಡಿಕೆ – ಜಾನ್ 19: 39–40 ರಲ್ಲಿ ಉಲ್ಲೇಖಿಸಲಾಗಿದೆ. ಹಿರೋಷಿಮ ನಾಗಸಾಕಿಯ ಮೇಲೆ ಬಾಂಬ್ ದಾಳಿಯಿಂದ ಉಂಟಾದ ಛರ್ಮ ಸಂಬಂಧ ಖಾಯಿಲೆಗಳನ್ನು ಗುಣಪಡಿಸಲು ಈ ಗಿಡವನ್ನು ಪರಿಣಾಮಕಾರಿಯಾಗಿ ಬಳಸಿಕೊಳ್ಳಲಾಗಿದೆ. ಪ್ರಮುಖವಾಗಿ 3 ಉದ್ದೇಶಗಳಿಗಾಗಿ ಈ ಗಿಡದ ಬಳಕೆಯಾಗುತ್ತಿದೆ. ಕೂದಲಿನ ಆರೋಗ್ಯ, ಚರ್ಮದ ಆರೋಗ್ಯ ಹಾಗೂ ದೇಹದ ತೂಕ ತಗ್ಗಿಸಿಕೊಳ್ಳಲು ಬಳಸಲಾಗುತ್ತಿದೆ. ಕರ್ನಾಟಕದಲ್ಲಿ ವಿಶೇಷವಾಗಿ 3 ತಳಿಗಳನ್ನು ಕೃಷಿಗಾಗಿ ಉಪಯೋಗಿಸಲಾಗುತ್ತಿದೆ.

1. ಅಲೊ ಬಾರ್ಬಡೆನ್ಸಿಸ್
2. ಅಲೊೂವೆರ ಲಿಟ್ಟೋರಾಲಿಸ್
3. ಅಲೊೂವೆರ ಚೈನೆನ್ಸಿಸ್

**ಅಲೊೂವೆರ ಕೃಷಿ ಪದ್ಧತಿ:** ಅಲೊೂವೆರವನ್ನು ಅತಿ ವಿಪರೀತ ಹವಾಗುಣಗಳಲ್ಲಿ ಹಾಗು ಹಲವು ಬಗೆಯ ಮಣ್ಣಿನಲ್ಲಿ ಬೆಳೆಸಬಹುದು. ಉದಾ: ಅತೀ ಹೆಚ್ಚು ಮಳೆ ಬರುವ ಪ್ರದೇಶವಾಗಿರಲಿ ಅಥವಾ ಕನಿಷ್ಟ ಮಳೆ ಬರುವ ಪ್ರದೇಶದಲ್ಲಿಯೂ ಇದನ್ನು ಬೆಳೆಸಬಹುದು. ಸಾಮಾನ್ಯವಾಗಿ ಚೆನ್ನಾಗಿ ನೀರು ಬಸಿದು ಹೋಗುವ ಇಳಿಜಾರು ಪ್ರದೇಶಗಳಲ್ಲಿ ಇದು ಚೆನ್ನಾಗಿ ಬೆಳೆಯುತ್ತದೆ. ಅಲೊವೆರ ಗಿಡದ ವಂಶಾ ಅಭಿವೃದ್ಧಿಯನ್ನು 2 ವಿಧವಾಗಿ ಮಾಡಬಹುದು. ತಾಯಿಗಿಡದ ಪಕ್ಕದಲ್ಲಿ ಬರುವ ಮರಿ ಕಂದುಗಳಿಂದ, ಮತ್ತು ಭೂಮಿಯೊಳಗಿನ ತಾಯಿಬೇರಿನ ಗೆಣ್ಣುಗಳನ್ನು ನಿರ್ಧಿಷ್ಟ ಅಂತರದಲ್ಲಿ ಕತ್ತರಿಸಿ ನರ್ಸರಿಯಲ್ಲಿ ನೆಟ್ಟು ಅವು ಮೊಳಕೆ ಬಂದ ನಂತರ ಬಿತ್ತನೆಗೆ ಬಳಸಬಹುದು.



**ಅಲೊೂವೆರ ಕೃಷಿಗೆ ಬೇಕಾಗುವ ಸಾಮಾಗ್ರಿಗಳು (ಒಂದು ಎಕರೆಗೆ)**

1. ಮರಿಕಂದುಗಳು– 11,000 ಸಂಖ್ಯೆ (2ಅಡಿ x 2ಅಡಿ)
2. ಹಟ್ಟಿಗೊಬ್ಬರ – 6 ಟನ್
3. ರಸಗೊಬ್ಬರಗಳು– ಸಾರಜನಕ – 20
   ಕೆಜಿ ರಂಜಕ – 20 ಕೆಜಿ
   ಪೊಟಾಷ್ – 20 ಕೆಜಿ

ಮಳೆಗಾಲದ ಪ್ರಾಂಭದಲ್ಲಿ ಭೂಮಿಯನ್ನು ಚೆನ್ನಾಗಿ ಉಳುಮೆ ಮಾಡಿ ಶಿಫಾರಸ್ಸು ಮಾಡಿದಷ್ಟು ಹಟ್ಟಿಗೊಬ್ಬರ ಮತ್ತು ರಸಗೊಬ್ಬರಗಳನ್ನು ಮಣ್ಣಿಗೆ ಬೆರೆಸಿ 2 ಅಡಿ ಅಂತರದ ದೋಣಿ ಸಾಲುಗಳನ್ನು ಹೊಡೆಯಬೇಕು. ನಂತರ ಕಂದುಗಳನ್ನು ದೋಣಿಸಾಲಿನ ಒಂದು ಬದಿಯ ದಿಬ್ಬದಲ್ಲಿ ಬೇರಿನ ಭಾಗ ಪೂರ್ತಿ ಮಣ್ಣಲ್ಲಿ ಮುಳುಗುವಂತೆ ಹೂಳಬೇಕು. ಮತ್ತು ಸಾಲುಗಳಲ್ಲಿ ಹದವಾಗಿ ನೀರು ಉಣಿಸಬೇಕು. ಯಾವುದೇ ಹಂತದಲ್ಲಿ ನೀರು ಮಡಿಗಟ್ಟದಂತೆ ನೋಡಿಕೊಳ್ಳಬೇಕು. (ಇಲ್ಲವಾದಲ್ಲಿ ಬೇರು ಕೊಳೆತು ಗಿಡ ಸಾಯುವುದು).

**ಸಸ್ಯ ಸಂರಕ್ಷಣೆ:** ಈ ಬೆಳೆಗೆ ಸಾಮಾನ್ಯವಾಗಿ 3 ವಿಧವಾದ ಸಮಸ್ಯೆಗಳುಂಟಾಗುತ್ತವೆ;

| ಕ್ರ.ಸಂ. | ಸಮಸ್ಯೆ | ಪರಿಹಾರ |
|---|---|---|
| 1. | ಸಸ್ಯ ಹೇನು | ಡೈಮಿಥೋಎಟ್ 1 ಮಿಲಿ/ ಲೀಟರ್ ಪ್ರಮಾಣದಲ್ಲಿ ನೀರಿಗೆ ಬೆರೆಸಿ ಸಿಂಪಡಿಸಬೇಕು. |
| 2. | ಬೂದುರೋಗ | ಕಾಂಟಾಫ್ 1 ಮಿಲಿ/ ಲೀಟರ್ ಪ್ರಮಾಣದಲ್ಲಿ ನೀರಿಗೆ ಬೆರೆಸಿ ಸಿಂಪಡಿಸಬೇಕು. |
| 3. | ಇರುವೆ | ಎಕರೆಗೆ 4 ಕೆ.ಜಿಯಂತೆ ಹೆಪ್ಟಾಕ್ಲೋರ್ 6% ಅನ್ನು ಮಣ್ಣಿಗೆ ಬೆರೆಸಬೇಕು. |

**ಕೊಯಿಲು ಮತ್ತು ಇಳುವರಿ:** ನಾಟಿ ಮಾಡಿದ 8ರಿಂದ 10 ತಿಂಗಳಲ್ಲಿ ಕೊಯ್ಲಿಗೆ ಬರುತ್ತದೆ. ಬೆಳೆಯನ್ನು ಎರಡು ಬಗೆಯಾಗಿ ಕೊಯಿಲು ಮಾಡಬಹುದು.

1. ಚೆನ್ನಾಗಿ ಬೆಳೆದ, ಬುಡದಲ್ಲಿರುವ 2–3 ದಳಗಳನ್ನು ಕೊಯ್ದು ಮೇಲಿನ ದಳಗಳು ಬೆಳೆಯಲು ಅವಕಾಶ ಕೊಡುವುದು ಹೀಗೆ ಕೊಯ್ಲು ಮಾಡಿದಾಗ ಎರಡನೇ ವರ್ಷದಿಂದ ಉತ್ತಮ ಇಳುವರಿ ದೊರೆಯುತ್ತದೆ ಹಾಗೂ ಐದು ವರ್ಷದವರೆಗೆ ಕೊಯ್ಲು ಮಾಡಬಹುದು.
2. ಇಡೀ ಗಿಡವನ್ನು ಕೊಯ್ಲು ಮಾಡುವುದು. ಒಂದು ಎಕರೆಯಿಂದ ಸರಾಸರಿ 4000 –4500 ಕಿಲೋಗ್ರಾಂನಷ್ಟು ಹಸಿ ಅಲೊೂವೆರ ಇಳುವರಿಯನ್ನು ಪಡೆಯಬಹುದು. ಹೀಗೆ ಕೊಯ್ಲು ಮಾಡಿದಾಗ 2ನೇ ವರ್ಷದಿಂದ ಉತ್ತಮ ಇಳುವರಿ ದೊರೆಯುತ್ತದೆ ಹಾಗೂ 5 ವರ್ಷದವರೆಗೆ ಇಳುವರಿಯನ್ನು ಪಡೆಯಬಹುದು.

**ಮುಂದುವರಿಯುವುದು . . . . . . .**

4ನೇ ಪುಟದಿಂದ ಮುಂದುವರೆದಿದೆ

ಆರು ವರ್ಷದೊಳಗಿನ ಮಕ್ಕಳು, ಗರ್ಭಿಣಿಯರು, ಬಾಣಂತಿಯರು ಹಾಗೂ ಕಿಶೋರಿಯರಿಗೆ ಸ್ಥಳೀಯ ಅಂಗನವಾಡಿ ಕೇಂದ್ರಗಳಲ್ಲಿ ಪೂರಕ ಪೌಷ್ಠಿಕ ಆಹಾರ ಲಭಿಸುವಂತೆ ಸ್ಥಳೀಯ ಸರಕಾರ, ಸಮುದಾಯ ಖಾತರಿವಹಿಸುವುದು. ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿ ಗ್ರಾಮ ಪಂಚಾಯತಿಯು, ತಳಮಟ್ಟದ ಸರಕಾರವಾಗಿದ್ದು ತನ್ನ ವ್ಯಾಪ್ತಿಯ ಸಮುದಾಯದ ಎಲ್ಲರ ರಕ್ಷಣೆ ಹಾಗೂ ಅವರಿಗೆ ಬೇಕಾದ ಮೂಲಭೂತ ಸೌಲಭ್ಯಗಳನ್ನು ಒದಗಿಸಿಕೊಡುವುದು ಅದರ ಮಹತ್ವದ ಕರ್ತವ್ಯವಾಗಿದೆ. ಪೌಷ್ಠಿಕ ಆಹಾರ ಪೂರೈಕೆಗೆ ಗ್ರಾಮ ಪಂಚಾಯಿತಿನ ಉಪ ಸಮಿತಿಯಾದ ಬಾಲ ವಿಕಾಸ ಸಮಿತಿಯನ್ನು ಪಂಚಾಯತ್ ರಾಜ್ ಅಧಿನಿಯಮ ಅನುಚ್ಛೇದ 61–ಎ ಪ್ರಕಾರ ರಚಿಸಲಾಗಿದ್ದು ಅದರ ಪಾತ್ರ ಬಹಳ ಹಿರಿದಾಗಿದೆ. ಬಹಳಷ್ಟು ಬಾಲ ವಿಕಾಸ ಸಮಿತಿಯ ಸದಸ್ಯರಿಗೆ ಅವರ ಜವಾಬ್ದಾರಿಗಳು ಹಾಗೂ ನಿರ್ವಹಿಸಬೇಕಾದ ಕರ್ತವ್ಯಗಳ ಬಗ್ಗೆ ಮಾಹಿತಿ ಇಲ್ಲ. ಈ ಸದಸ್ಯರುಗಳಿಗೆ ತರಬೇತಿಯನ್ನು ನೀಡಿ ಅವರು ನಿರ್ವಹಿಸಬೇಕಾದ ಕರ್ತವ್ಯಗಳ ಬಗ್ಗೆ ಮಾಹಿತಿ ನೀಡಿದಲ್ಲಿ ಈ ಸಮಿತಿಯು ಕ್ರಿಯಾತ್ಮಕವಾಗಿ ಕಾರ್ಯ ನಿರ್ವಹಿಸಲು ಸಾಧ್ಯವಾಗುತ್ತದೆ. ಆಹಾರ ಖಾತರಿ ಸಮಿತಿ, ಆಹಾರ ಜಾಗೃತಿ ಸಮಿತಿ, ಆರೋಗ್ಯ ಮತ್ತು ನೈರ್ಮಲ್ಯ ಸಮಿತಿ ಹಾಗೂ ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿ, ಈ ಸಮಿತಿಗಳ ಮೂಲಕ ಸಮುದಾಯವನ್ನು ಕ್ರಿಯಾತ್ಮಕವಾಗಿ ತೊಡಗಿಸಿದಾಗ ಮಕ್ಕಳಲ್ಲಿನ ಅಪೌಷ್ಠಿಕತೆ ಹಾಗೂ ಅವರಿಗೆ ಬರುವ ಕಾಯಿಲೆಗಳನ್ನು ನೀಗಿಸಿ ಮಗುವಿನ ಸಮಗ್ರ ಬೆಳವಣಿಗೆಗೆ ನಾಂದಿಹಾಡಬಹುದು.

ಸಂಬಂಧಿತ ಹೆಚ್ಚಿನ ವಿವರಗಳಿಗೆ ಸ್ಥಳೀಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಅಧಿಕಾರಿಗಳನ್ನು ಭೇಟಿ ಮಾಡಿ ಮಾಹಿತಿ ಪಡೆಯಬಹುದಾಗಿದೆ.

# ಬದುಕು ಬದಲಿಸಿದ ಹೊಲಿಗೆ ವೃತ್ತಿ

**ಯಶೋಗಾಥೆ**

ಶ್ರೀಮತಿ ಸುಲೋಚನಾ ಕೊಡಿಯಾ, ಸಿದ್ದಾಪುರದ ಆಡುಕಟ್ಟಾ ಎಂಬಲ್ಲಿನ ಬಡ ಕುಟುಂಬದ ಮಹಿಳೆ, ಅಕ್ಷರಸ್ಥಳಾಗಿದ್ದು ದೈವಾದೀನ ಶ್ರೀ ಮಂಜುನಾಥ ಕೊಡಿಯಾ ಇವರ ಪತ್ನಿ. ಇವರಿಗೆ ಒಟ್ಟು 4 ಜನ ಹೆಣ್ಣು ಮಕ್ಕಳು.

ಶ್ರೀಮತಿ ಸುಲೋಚನಾ ಇವರು ಆರ್ಥಿಕವಾಗಿ ತೀರಾ ಬಡವರಾಗಿದ್ದು, ತನ್ನ ಪತಿಯ ಕ್ಷೌರಿಕ ವೃತ್ತಿ ಹಾಗೂ ಕೂಲಿಯಿಂದ ಜೀವನ ಸಾಗಿಸುವಲ್ಲಿ ಕಷ್ಟಪಡುತ್ತಿದ್ದರು. ಜೀವನದಲ್ಲಿ ಬಹಳ ಕಹಿನೋವನ್ನು ಅನುಭವಿಸಿದ್ದಾರೆ.





ಸುಲೋಚನಾ ಮತ್ತು ಕುಟುಂಬದ ಸಸದಸ್ಯರು

ಇವರ ಪತಿ ಕ್ಷೌರಿಕ ವೃತ್ತಿಯಿಂದ ಗಳಿಸಿದ ಹಣವನ್ನು ಕುಡಿದು ಹಾಳು ಮಾಡುವುದಲ್ಲದೆ ಮನೆಗೆ ಬಂದು ಕುಟುಂಬದವರಿಗೆ ದೈಹಿಕ ಹಾಗೂ ಮಾನಸಿಕ ಹಿಂಸೆ ನೀಡುತ್ತಿದ್ದರು. ಇದು ಮಕ್ಕಳ ಓದಿನ ಮೇಲೆ ದುಷ್ಪರಿಣಾಮ ಬೀರುತ್ತಿತ್ತು. ಮೂರು ಹೆಣ್ಣು ಮಕ್ಕಳಿಗೆ ವಿದ್ಯಾಭ್ಯಾಸ ಕೊಡಿಸುವುದು ಬಹಳ ಕಷ್ಟವಾಗಿದ್ದರೂ ಶ್ರೀಮತಿ ಸುಲೋಚನಾ ಅಡಿಕೆ ಸುಲಿಯುವ ಕೂಲಿ ಕೆಲಸಮಾಡಿ ಬಂದ ಹಣದಿಂದ ಕುಟುಂಬದ ನಿರ್ವಹಣೆ ಬಹಳ ದುಸ್ತರವಾಗಿತ್ತು.

ಶ್ರೀಮತಿ ಸುಲೋಚನಾರವರು ಸಂಕೋಚ ಸ್ವಭಾವದರಾಗಿದ್ದು ಬೇರೆಯವರೊಂದಿಗೆ ಬೆರೆಯುತ್ತಿರಲಿಲ್ಲ. ಜೀವನದಲ್ಲಿ ಭಯ, ಒಂದು ರೀತಿಯ ಹಿಂಜರಿಕೆ, ಸಂಕುಚಿತ ಮನೋಭಾವ, ಕೀಳರಿಮೆ, ಅನುಮಾನ ಇತ್ಯಾದಿ ಗುಣಗಳಿಂದ ತುಂಬಿದ ವ್ಯಕ್ತಿಯಾಗಿದ್ದರು. ಆನಂದ ಜ್ಯೋತಿ ಸಂಘದ ಸದಸ್ಯೆಯಾದ ನಂತರ ಸುಲೋಚನಾ ಪರಿವರ್ತಿತರಾಗಿ ಗ್ರಾಮದ ಜನರೊಂದಿಗೆ ಬೆರೆತು ಧೈರ್ಯ, ಜ್ಞಾನ, ಸಂಪರ್ಕ ಬೆಳೆಸಿಕೊಂಡಿದ್ದಾರೆ. ಆದಾಯ ತರುವ ಚಟುವಟಿಕೆ, ಸ್ವ ಉದ್ಯೋಗ ತರಬೇತಿ, ಕೌಶಲ್ಯಾಭಿವೃದ್ಧಿ ತರಬೇತಿ ಹಾಗೂ ಉದ್ಯಮಶೀಲತಾ ತರಬೇತಿಗಳನ್ನು ಪಡೆದು ಹೊಲಿಗೆ ಕಲಿತು, ಸಂಘದಿಂದ ಸಾಲ ಪಡೆದು ಹೊಲಿಗೆ ಯಂತ್ರ ಖರಿದಿಸಿದ್ದಾರೆ. ಹೆಣ್ಣು ಮಕ್ಕಳ ವಿವಿಧ ವಿನ್ಯಾಸದ ಉಡುಪುಗಳನ್ನು ಸೊಗಸಾಗಿ ಹೊಲಿದು, ಕುಟುಂಬದ ನಿರ್ವಹಣೆಗೆ ಸಂಪಾದಿಸಿ, ಒಂದಷ್ಟು ಗಳಿಕೆಯ ಹಣ ಉಳಿಕೆಯಾಗುತ್ತಿತ್ತು.

ಕೆ.ಡಿ.ಡಿ.ಸಿ. ಸಂಸ್ಥೆಯು ನೀಡಿದ ಉದ್ಯಮಶೀಲತಾ ತರಬೇತಿಯಿಂದ ತಮ್ಮಲ್ಲಿರುವ ಬಂಡವಾಳ ಹಾಗೂ ಸಂಘದಿಂದ ರೂ.15,000/– ಹಾಗೂ ಕಿರು ಉದ್ದಿಮೆಯಿಂದ ರೂ.15000/– ಸಾಲ ಪಡೆದು ಹೊಲಿಗೆ ಕಸುಬಿನೊಂದಿಗೆ ಬಿಡುವಿನ ವೇಳೆಯಲ್ಲಿ ಮನೆಯಲ್ಲಿಯೇ ಕೋಳಿಸಾಕಾಣಿಕೆ ಮತ್ತು ಹಾಲಿನ ಡೈರಿ ನಡೆಸಿ ಒಟ್ಟು ಆದಾಯವನ್ನು ದ್ವಿಗುಣಗೊಳಿಸಿದ್ದಾರೆ. ಮೂವರು ಹೆಣ್ಣುಮಕ್ಕಳಿಗೆ ಹೈಸ್ಕೂಲ್ ಶಿಕ್ಷಣವನ್ನು ಕೊಡಿಸಿದ್ದಾರೆ. ತನ್ನ ಕಾಲಲ್ಲಿ ತಾನು ನಿಂತು ಜೀವನ ಸಾಗಿಸುತ್ತಿದ್ದಾರೆ.

ಶ್ರೀಮತಿ ಸುಲೊಚನಾ ತನ್ನ ಸಾಧನೆಗೆ ಹೆಮ್ಮೆಪಟ್ಟು ಸಂಘಕ್ಕೆ ಹಾಗೂ ಕೆ.ಡಿ.ಡಿ.ಸಿ. ಸಂಸ್ಥೆಗೆ ಕೃತಜ್ಞತೆಯೊಂದಿಗೆ ಸ್ಮರಿಸುತ್ತಾರೆ.

# ವಾರ್ತಾ ವಿಶೇಷ

ಶ್ರೀ ಕ್ಲೆಮೆಂಟ್ ಫರ್ನಾಂಡಿಸ್ ಮತ್ತು ಶ್ರೀ ರಿಚರ್ಡ್ ಮಾರ್ಟಿಸ್



**ಕ್ರಾಸ್ ಸಂಸ್ಥೆಯ ಆಡಳಿತ ಮಂಡಳಿಯ ಸಭೆ:** ನವೆಂಬರ್ 17, 2015 ರಂದು ಕ್ರಾಸ್ ಸಂಸ್ಥೆಯ ಆಡಳಿತ ಮಂಡಳಿಯ ಸಭೆ ನಡೆಯಿತು. ಸಭೆಯ ಅಧ್ಯಕ್ಷತೆಯನ್ನು ಅತೀ ವಂದನೀಯ ಡಾ" ಥಾಮಸ್ ವಾಝುಪಿಳ್ಳಿ, ಧರ್ಮಾಧ್ಯಕ್ಷರು-ಮೈಸೂರು ಧರ್ಮಕ್ಷೇತ್ರ ಹಾಗೂ ಕ್ರಾಸ್ ಸಂಸ್ಥೆಯ ಉಪಾಧ್ಯಕ್ಷರು ವಹಿಸಿದರು. ಕ್ರಾಸ್ ಸಂಸ್ಥೆಯ ನಿರ್ದೇಶಕರಾದ ವಂದನೀಯ ಸ್ವಾಮಿ ಸೆಬಾಸ್ಟಿಯನ್ ಫರ್ನಾಂಡಿಸ್, ಸದಸ್ಯರು ಮತ್ತು ವಿಶೇಷ ಆಹ್ವಾನಿತರು ಉಪಸ್ಥಿತರಿದ್ದರು. ಕ್ರಾಸ್ ಸಂಸ್ಥೆಯಿಂದ ಹಮ್ಮಿಕೊಂಡಿರುವ ವಿವಿಧ ಯೋಜನೆಗಳ ವರದಿ ಮಂಡನೆ ಮತ್ತು ಅಭಿವೃದ್ಧಿಯ ಬಗ್ಗೆ ಚರ್ಚಿಸಲಾಯಿತು. ಕ್ರಾಸ್ ಸಂಸ್ಥೆಯ ನಿರ್ದೇಶಕರಾದ ವಂದನೀಯ ಸ್ವಾಮಿ ಸೆಬಾಸ್ಟಿಯನ್ ಫರ್ನಾಂಡಿಸ್‌ರವರ ವಂದನಾರ್ಪಣೆಯೊಂದಿಗೆ ಸಭೆಯು ಮುಕ್ತಾಯಗೊಂಡಿತು.



**ಮಹಿಳಾಭಿವೃದ್ಧಿ ಕಾರ್ಯಕ್ರಮ:** ಮಹಿಳಾಭಿವೃದ್ಧಿ ಕಾರ್ಯಕ್ರಮದ ತ್ರೈಮಾಸಿಕ ಪ್ರಗತಿ ಪರಿಶೀಲನಾ ಶಿಬಿರವು ಕ್ರಾಸ್ ಸಂಸ್ಥೆಯ ಸಂಪನ್ಮೂಲ ಕೇಂದ್ರದಲ್ಲಿ ನವೆಂಬರ್ 18 ಮತ್ತು 19, 2015 ರಂದು ನಡೆಯಿತು. 14 ಪಾಲುದಾರ ಸಂಸ್ಥೆಗಳ 45 ಪ್ರತಿನಿಧಿಗಳು ಭಾಗವಹಿಸಿದ್ದರು. ತಮ್ಮ ಕಾರ್ಯವ್ಯಾಪ್ತಿಯಲ್ಲಿ ಕಳೆದ 3 ತಿಂಗಳಲ್ಲಿ ನಿರ್ವಹಿಸಿದ ಅಭಿವೃದ್ಧಿ ಸಾಧನೆಗಳ ಬಗ್ಗೆ ಸಂಕ್ಷಿಪ್ತವಾಗಿ ಮಂಡಿಸಿದರು. ಕ್ರಾಸ್ ಸಂಸ್ಥೆಯ ನಿರ್ದೇಶಕರಾದ ವಂದನೀಯ ಸ್ವಾಮಿ ಸೆಬಾಸ್ಟಿಯನ್ ಫರ್ನಾಂಡಿಸ್‌ರವರು ಸಂಯೋಜಕರ ಕಾರ್ಯ ವೈಖರಿ ಹಾಗು ಮಹಿಳಾಭಿವೃದ್ಧಿಯಲ್ಲಿನ ಸಾಧನೆಗಳನ್ನು ಅಭಿನಂದಿಸಿದರು. ಮಹಿಳೆಯರು ಸ್ವಾವಲಂಬನೆಯತ್ತ ಸಾಗುತ್ತಿರುವ ಬಗ್ಗೆ ಹೆಮ್ಮೆ ವ್ಯಕ್ತಪಡಿಸಿದರು. ಎರಡು ದಿನದ ಕಾರ್ಯಕ್ರಮದ ನಿರ್ವಹಣೆಯನ್ನು ಕ್ರಾಸ್ ಸಂಸ್ಥೆಯ ಸಂಯೋಜಕರುಗಳಾದ ಸಿಸ್ಟರ್ ನಾನ್ಸಿ ಲೋಬೊ ಮತ್ತು ಸಿಸ್ಟರ್ ಲೂಸಿಯ ರವರು ವ್ಯವಸ್ಥಿತವಾಗಿ ನಿರ್ವಹಿಸಿ ಎಲ್ಲರನ್ನು ಹುರಿದುಂಬಿಸಿದರು.

**ಮಾನೊಸ್‌ಉನಿದಾಸ್ ಸ್ಪೈನ್‌ನ ದಾನಿಸಂಸ್ಥೆಯ ಭೇಟಿ:**



**ಮಾನೊಸ್ ಉನಿದಾಸ್** ಸಂಸ್ಥೆಯ ಪ್ರತಿನಿಧಿಗಳಾಗಿ ಶ್ರೀಮತಿ ಎಲೀನ ಫರ್ನಾಂಡೀಸ್ ಮತ್ತು ಶ್ರೀಮತಿ ಅಲೆಕ್ಸಾಂಡ್ರ ಗಾರ್ಸಿಯರವರು ನವೆಂಬರ್ 29, 2015 ರಂದು ಕ್ರಾಸ್ ಸಂಸ್ಥೆಗೆ ಭೇಟಿ ನೀಡಿದರು. ಇವರು ಡಿಸೆಂಬರ್ 1, 2015 ರಂದು ಆ ಸಂಸ್ಥೆಯಿಂದ ಅನುಸ್ಠಾನಗೊಂಡ ಯೋಜನೆಯು ಪ್ರಗತಿ ಪರಿಶೀಲನೆಗಾಗಿ ಕ್ಷೇತ್ರ ಭೇಟಿ ನೀಡಿದರು. ಚೈತನ್ಯ ನವೀಕರಿಸಬಹುದಾದ ಇಂಧನ ಯೋಜನೆಯಡಿಯಲ್ಲಿ ಜನರ ಜೀವನಸ್ಥಿತಿ, ಆರೋಗ್ಯದ ಕುರಿತು ಕಾಳಜಿ ವಹಿಸುತ್ತಿರುವ ಬಗ್ಗೆ ಇಬ್ಬರು ಪ್ರತಿನಿಧಿಗಳು ಸಂತಸ ವ್ಯಕ್ತಪಡಿಸಿದರು. ಫಲಾನುಭವಿಗಳು ತಮ್ಮ ಉತ್ತಮ ಸ್ಥಿತಿಗೆ ಕಾರಣಕರ್ತರಾದ ಸಂಸ್ಥೆಯ ಬಗ್ಗೆ ತಮ್ಮ ಕೃತಜ್ಞತೆಯನ್ನು, ಭವಿಷ್ಯದಲ್ಲಿ ಇನ್ನೂ ಉತ್ತಮ ಸಂಬಂಧದ ಬಗ್ಗೆ ಆಶಾಭಾವನೆಯನ್ನು ವ್ಯಕ್ತಪಡಿಸಿದರು.



ಡಿಸೆಂಬರ್ 9, 2015 ರಂದು ಶ್ರೀಮತಿ ಎಲೀನ ಫರ್ನಾಂಡೀಸ್ ಮತ್ತು ಶ್ರೀಮತಿ ಅಲೆಕ್ಸಾಂಡ್ರ ಗಾರ್ಸಿಯ ರವರು ಬೆಂಗಳೂರು ಮಹಾಧರ್ಮಕ್ಷೇತ್ರದ ಮಹಾ ಧರ್ಮಾಧ್ಯಕ್ಷರು ಆಗಿರುವ ಪರಮ ಪೂಜ್ಯ ಡಾ॥ ಬರ್ನಾರ್ಡ್ ಮೋರಾಸ್‌ರವರನ್ನು ಭೇಟಿಯಾಗಿ ತಮ್ಮ ಯೋಜನೆಯ ಪ್ರಗತಿ ಪರಿಶೀಲನೆಗಾಗಿ ತಾವು ಕರ್ನಾಟಕಕ್ಕೆ ಬಂದಿರುವುದಾಗಿ ತಿಳಿಸಿದರು. ಪರಮ ಪೂಜ್ಯ ಡಾ॥ ಬರ್ನಾರ್ಡ್ ಮೋರಾಸ್‌ರವರು ಕರ್ನಾಟಕದಲ್ಲಿ ತಾವು ಮಾನೊಸ್ ಉನಿದಾಸ್ ಸಂಸ್ಥೆಯಿಂದ ಆರ್ಥಿಕ ನೆರವು ಪಡೆಯುತ್ತಿರುವ ಕೈಗೆತ್ತಿಕೊಳ್ಳಲು ಇಚ್ಛಿಸಿದ ಹೊಸ ಕಾರ್ಯಕ್ರಮಗಳಾದ ವಿವಿಧ ಕೂಲಿ ಕಾರ್ಮಿಕರ, ವಲಸಿಗರ ಮತ್ತು ತೀರಾ ಹಿಂದುಳಿದ ಸಮುಧಾಯದ ಪುನರ್ವಸತಿ ಯೋಜನೆಯನ್ನು ವಿವರಿಸಿದರು. ಕರ್ನಾಟಕದಂತಹ ಹಿಂದುಳಿದ ಪ್ರದೇಶಗಳಿಗೆ ಅಭಯಹಸ್ತ ನೀಡುತ್ತಿರುವ ಮಾನೊಸ್‌ಉನಿದಾಸ್ ಸಂಸ್ಥೆಗೆ ಕರ್ನಾಟಕ ಪ್ರಾಂತ್ಯದ ಸಕಲ ಧರ್ಮಾಧ್ಯಕ್ಷರ ಪರವಾಗಿ ಅಭಿನಂದಿಸಿದರು. ಭೇಟಿಯ ಕೊನೆಯ ದಿನದಂದು ಶ್ರೀಮತಿ ಎಲೀನ ಫರ್ನಾಂಡೀಸ್ ಮತ್ತು ಶ್ರೀಮತಿ ಅಲೆಕ್ಸಾಂಡ್ರ ಗಾರ್ಸಿಯರವರು ಕ್ರಾಸ್ ಸಂಸ್ಥೆಯ ಸಿಬ್ಬಂಧಿಯೊಂದಿಗೆ ಸಮಾಲೋಚನೆ ಮಾಡಿದರು ಮತ್ತು ಚಾಲ್ತಿಯಲ್ಲಿರುವ ಯೋಜನೆಯನ್ನು ಹೇಗೆ ಮುಂದುವರೆಸಿಕೊಂಡು ಹೋಗಬಹುದೆಂಬ ಬಗ್ಗೆ ಚರ್ಚಿಸಿದರು.

**ಕಿರುಉದ್ದಿಮೆಯಲ್ಲಿ ಮಹಿಳೆಯರು – ಯೋಜನೆಯ ಪ್ರಗತಿ ಪರಿಶೀಲನಾ ಕಾರ್ಯಕ್ರಮ:**

ಕಿರುಉದ್ದಿಮೆಯಲ್ಲಿ ಮಹಿಳೆಯರ ಪಾತ್ರ :('ಸಮೃದ್ಧಿ') – ಯೋಜನೆಯ ಪ್ರಗತಿ ಪರಿಶೀಲನಾ ಕಾರ್ಯಕ್ರಮ ಡಿಸೆಂಬರ್ 15 ಮತ್ತು 16 ರಂದು ಕ್ರಾಸ್ ಸಂಪನ್ಮೂಲ ಕೇಂದ್ರದಲ್ಲಿ ಜರುಗಿತು. ಎಲ್ಲಾ ಪಾಲುದಾರ ಸಂಸ್ಥೆಯ ಸಂಯೋಜಕರು ಇದರಲ್ಲಿ ಭಾಗವಹಿಸಿದರು.

ಕ್ರಾಸ್ ಸಂಸ್ಥೆ ಮತ್ತು 'ಸಮೃದ್ಧಿ'ಯ ನಿರ್ದೇಶಕರಾದ ವಂದನೀಯ ಸ್ವಾಮಿ ಸೆಬಾಸ್ಟಿಯನ್ ಫರ್ನಾಂಡಿಸ್‌ರವರು ಪ್ರಾಸ್ತಾವಿಕವಾಗಿ ಮಾತನಾಡುತ್ತಾ ಈ ಯೋಜನೆಯ ಕಡುಬಡತನದಲ್ಲಿರುವವರ ಆರ್ಥಿಕ ಪ್ರಗತಿ ಸಾಧಿಸಿ, ಸ್ವಾವಲಂಬಿತರ ನ್ನಾಗಿಸುವುದಾಗಿದೆ. ಇವರ ಸ್ಥಿತಿಗತಿಯನ್ನು ಸುಧಾರಿಸುವ ದೂರದೃಷ್ಟಿಯನ್ನು ಇಟ್ಟುಕೊಂಡು ಯೋಜನೆಯನ್ನು ರೂಪಿಸಲಾಗಿದೆ. ಅದುದರಿಂದ ಈ ದಿಶೆಯಲ್ಲಿ ನಾವು ಹೆಚ್ಚಿನ ತರಬೇತಿ, ಕೌಶಲ್ಯದ ಅರಿವು



ಪಾಲುದಾರ ಸಮುದಾಯಕ್ಕೆ ನೀಡುವುದರ ಮೂಲಕ ವಿವಿಧ ಕಿರುಉದ್ದಿಮೆಯಲ್ಲಿ ಸಕ್ರಿಯವಾಗಿ ಭಾಗವಹಿಸುವಂತೆ ಪ್ರೇರೇಪಿಸುವುದು ಹಾಗೂ ಆರ್ಥಿಕವಾಗಿ ಸುಧಾರಿಸುವುದು ನಮ್ಮ ಕರ್ತವ್ಯವಾಗಿದೆ ಎಂದರು.

ಡಾ. ರಾಜಶೇಖರ್, ಗಾಂಧೀಜಿ ಕೃಷಿ ವಿಜ್ಞಾನ ಮಹಾವಿದ್ಯಾಲಯದ ನಿವೃತ್ತ ಪ್ರಾಧ್ಯಾಪಕರು ಹಾಗೂ ಪ್ರಸ್ತುತ ಕ್ರಾಸ್ ಸಂಸ್ಥೆಯ ಸಿಬ್ಬಂಧಿ, ಇವರು ಪಶುಸಂಗೋಪನೆ ಮತ್ತು ಹೈನುಗಾರಿಕೆಯ ಬಗ್ಗೆ ತರಬೇತಿಯನ್ನು ನಡೆಸಿಕೊಟ್ಟರು. ಬಡಜನರಲ್ಲಿ ಪರ್ಯಾಯ ಆರ್ಥಿಕ ಗಳಿಕೆಯನ್ನು ಹೇಗೆ ಹೆಚ್ಚಿಸಬಹುದೆಂಬುದರ ಬಗ್ಗೆ ವಿವರಿಸಿದರು. ದುಬಾರಿ ಬೆಲೆಯ ಗೊಬ್ಬರ ಖರೀದಿ ಮಾಡುವ ಬದಲು ಸಾವಯವಗೊಬ್ಬರ ತಯಾರಿಸಿ ಖರ್ಚನ್ನು ಕಡಿಮೆಗೊಳಿಸಬಹುದೆಂಬ ಆರ್ಥಿಕ ಸುಧಾರಣೆಯ ಒಳಮರ್ಮವನ್ನು ಎಲ್ಲರಿಗೂ ಮನದಟ್ಟಾಗುವಂತೆ ವಿವರಿಸಿದರು ಶಿಬಿರಾರ್ಥಿಗಳು ತಾವು ಸಾಧಿಸಿದ ತ್ರೈಮಾಸಿಕ ಪ್ರಗತಿ ವರದಿ ಮತ್ತು ನೈಜಘಟನೆಯನ್ನು ವಿವರಿಸಿದರು.

ಶ್ರೀಮತಿ ಆನಿ ಅನಿತಾರವರು ರಸಪ್ರಶ್ನೆಯ ಮುಖಾಂತರ ಕಾರ್ಯಕ್ರಮದ ಮಾಹಿತಿಯನ್ನು ಪಾಲುದಾರರ ಸಂಸ್ಥೆಯ ಕಾರ್ಯಕರ್ತರಲ್ಲಿ ಹೆಚ್ಚಿಸಿದರು.

## ಕೇಂದ್ರ ಮತ್ತು ಕರ್ನಾಟಕ ರಾಜ್ಯ ಲೋಕಸೇವಾ ಆಯೋಗಗಳು ಹಾಗೂ ಇತರೆ ನೇಮಕಾತಿ ಪ್ರಾಧಿಕಾರಗಳು ನಡೆಸುವ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತರಬೇತಿ

ಕೇಂದ್ರ ಮತ್ತು ಕರ್ನಾಟಕ ಲೋಕಸೇವಾ ಆಯೋಗಗಳು ಹಾಗೂ ಇತರೆ ನೇಮಕಾತಿ ಪ್ರಾಧಿಕಾರಗಳು ನಡೆಸುವ ಪರೀಕ್ಷೆಗಳನ್ನು ಗಮನದಲ್ಲಿಟ್ಟು ಕೊಂಡು ಕರ್ನಾಟಕ ಪ್ರಾಂತೀಯ ಕಥೋಲಿಕ ಧರ್ಮಾಧ್ಯಕ್ಷರ ಮಂಡಳಿಯ ಮಾರ್ಗದರ್ಶನದೊಂದಿಗೆ **ಕ್ರಾಸ್ ಸಂಸ್ಥೆಯು** ಅಭ್ಯರ್ಥಿಗಳಿಗೆ ಪರೀಕ್ಷಾ ಪೂರ್ವ ತರಬೇತಿಯನ್ನು ತಜ್ಞ ಮತ್ತು ಪರಿಣಿತ ಸಂಪನ್ಮೂಲ ವ್ಯಕ್ತಿಗಳ ಮೂಲಕ ನೀಡುತ್ತಿದೆ. ಗುಣಾತ್ಮಕ ಭೋಧನೆಯನ್ನು ಕೊಡುವ ಮೂಲಕ ಸಾರ್ವಜನಿಕ ಸೇವೆಗಳಲ್ಲಿ ಮೌಲ್ಯಾಧಾರಿತ ನಾಯಕತ್ವವನ್ನು ಪ್ರೋತ್ಸಾಹಿಸುವುದು ಈ ಯೋಜನೆ ಉದ್ದೇಶವಾಗಿದೆ. ಪ್ರಸ್ತುತ ಈ ಕೆಳಕಂಡ ತರಬೇತಿಗಳನ್ನು ನಮ್ಮ ಸಂಸ್ಥೆಯಲ್ಲಿ ನೀಡಲಾಗುತ್ತಿದೆ;

1. ಕೇಂದ್ರ ಲೋಕಾಸೇವಾ ಆಯೋಗದವರು ನಡೆಸುವ ಗ್ರೂಫ್ 'ಎ' ಮತ್ತು 'ಬಿ' ಪರೀಕ್ಷೆಗಳು
2. ಕರ್ನಾಟಕ ಲೋಕ ಸೇವಾ ಆಯೋಗ ನಡೆಸುವ ಗ್ರೂಫ್ 'ಎ' ಮತ್ತು 'ಬಿ' ಪರೀಕ್ಷೆಗಳು
3. ಬ್ಯಾಂಕುಗಳು, ಇನ್‌ಸುರೇನ್ಸ್ ಕಂಪನಿಗಳು, ಸಾರ್ವಜನಿಕ/ರಾಜ್ಯ ಸರ್ಕಾರದ ಸ್ವಾಯತ್ತ ಸಂಸ್ಥೆಗಳು ಹಾಗೂ ಇತರೆ ಸಂಸ್ಥೆಗಳು ನಡೆಸುವ ಅಧಿಕಾರಿಗಳ ದರ್ಜೆಯ ಪರೀಕ್ಷೆಗಳು;

## ಕ್ರಾಸ್ ಸಂಸ್ಥೆಯಿಂದ ಶುಭಕಾಮನೆಗಳು



ಕರ್ನಾಟಕ ಲೋಕಸೇವಾ ಆಯೋಗವು 2012–13 ಸಾಲಿನಲ್ಲಿ ನಡೆಸಿದ ಅಬಕಾರಿ ಉಪನಿರ್ದೇಶಕರ ಹುದ್ದೆಗಳ ನೇಮಕಾತಿಯಲ್ಲಿ ಶ್ರೀ ಜಾನ್ ಪಿ.ಜೆ. ಆಯ್ಕೆ ಆಗಿದ್ದಾರೆ. ಶ್ರೀಯುತರಿಗೆ ಕ್ರಾಸ್ ಸಂಸ್ಥೆಯಿಂದ ಶುಭಕಾಮನೆಗಳು.



ಕರ್ನಾಟಕ ರಿಸರ್ವ್ ಪೊಲೀಸ್ ನೇಮಕಾತಿ(ಕೆ ಎಸ್ ಆರ್ ಪಿ) ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ಪೊಲೀಸ್ ಇಲಾಖೆಗೆ ನೇಮಕಾತಿಗೊಂಡಿರುವ ಶ್ರೀ ಅರುಳ್ ಪ್ರೀಥಂ ಡಿ'ಸೋಜರವರಿಗೆ ಕ್ರಾಸ್ ಸಂಸ್ಥೆಯಿಂದ ಶುಭಕಾಮನೆಗಳು.

**ಪ್ರತಿಗಳಿಗಾಗಿ ಸಂಪರ್ಕಿಸಿ :**

**ಕರ್ನಾಟಕ ರೀಜನಲ್ ಆರ್ಗನೈಝೇಷನ್ ಫಾರ್ ಸೋಶಿಯಲ್ ಸರ್ವೀಸ್ (ಕ್ರಾಸ್)**

ಅಂಚೆ ಪೆಟ್ಟಿಗೆ – 8427 ನಂ. 58/6 , 2ನೇ ಅಡ್ಡ ರಸ್ತೆ, ಡಕೋಸ್ಟ ಲೇಔಟ್, ವೀಲರ್ ರೋಡ್ ಬಡಾವಣೆ,
ಬೆಂಗಳೂರು 560084. ದೂರವಾಣಿ ಸಂಖ್ಯೆ : 080– 25496812/13, ಇ–ಮೇಲ್ : krossdir@gmail.com
ವೆಬ್‌ಸೈಟ್ : www.krossbangalore.com